ದಿನಾಂಕ 01.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ- ವಾದಿಗಳ ಪರ ವಕೀಲರಿಂದಃ-**

ನಾನು ಈ ದಾವೆಯಲ್ಲಿ ಪಕ್ಷಗಾರನಲ್ಲ. ದಾವಾಸ್ವತ್ತಿಗೆ ಸಂಬಂಧಿಸಿದಂತೆ 2016 ರಲ್ಲಿ 1ನೇ ಪ್ರತಿವಾದಿಯು ಪಿ.ಜಿ ಸುಬ್ಬಯ್ಯ, ದೇವಯ್ಯ, ಕುಟ್ಟಪ್ಪ, ಮಂದಯ್ಯ ಮತ್ತು ರಾಜಾ ರವರ ವಿರುದ್ದ ಕೇವಿಯಟ್ ಅರ್ಜಿ ಸಲ್ಲಿಸಿದ್ದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾನು ಸರ್ವೆ ನಂ. 150/1 ರಲ್ಲಿ ಒಂದು ಎಕರೆ ಜಮೀನನ್ನು ಕೊಳ್ಳಿಮಾಡ ಪೂವಯ್ಯರವರ ಮಗ ಸುಬ್ಬಯ್ಯರವರಿಂದ ಖರೀದಿಸಿರುತ್ತೇನೆ. ಸದರಿ 1 ಎಕರೆ ಜಮೀನನ್ನು 2004 ರಲ್ಲಿ ನಾನು ಕೊಡವ ಸಮಾಜಕ್ಕೆ ಮಾರಾಟ ಮಾಡಿರುತ್ತೇನೆ. ಕೊಡವ ಸಮಾಜ ಮತ್ತು ನನಗೆ ತೊಂದರೆ ಯಾಗಬಾರದೆಂಬ ಉದ್ದೇಶದಿಂದ 1ನೇ ಪ್ರತಿವಾದಿಯ ಮೂಲಕ ಕೇವಿಯಟ್ ಅರ್ಜಿಯನ್ನು ಹಾಕಿಸಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ಅಸಲು ದಾವಾ ಸಂಖ್ಯೆ 38/1977 ರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಪ್ರತಿವಾದಿ 6 ಮತ್ತು 7 ರವರು 1 ಎಕರೆ ಜಮೀನನ್ನು ಪೂವಯ್ಯರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಇರಬಹುದು. ವಾದಿಗಳು ಮತ್ತು ಪ್ರತಿವಾದಿ 6 ಹಾಗೂ 7 ರವರು ಹಿಂದೂ ಅವಿಭಕ್ತ ಒಟ್ಟು ಕುಟುಂಬದ ಸದಸ್ಯರು ಎಂದರೆ ನನಗೆ ಗೊತ್ತಿಲ್ಲ. ದಾವಾಸ್ವತ್ತು ವಾದಿಗಳ ಪಿತ್ರಾರ್ಜಿತ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ. ನನಗೆ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹಾ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.